"ಡಿಸೋಜ, ಧನ್ಯವಾದಗಳು. ನನ್ಗೆ ಒಂದೆರಡು ವಿಷ್ಯಗಳ ಬಗ್ಗೆ ಸ್ಪಷ್ಟೀಕರಣ ಬೇಕಿತ್ತು. ಚಿದಾನಂದ, ನೀನ್ಯಾಕೆ ಎಸ್‌ಡಿ ಕಾರ್ಡಿನಲ್ಲಿ ಆ ವಿಡಿಯೊ ಇಟ್ಟೆ. ಗೂಗಲ್ ಡ್ರೈವ್ ಅಥವಾ ಡ್ರಾಪ್ ಬಾಕ್ಸ್ ಮುಂತಾದ ಅಂತರ್ಜಾಲದ ತಾಣಗಳಲ್ಲಿ ಅದನ್ನು ಶೇಖರಿಸಿಡಬಹುದಿತ್ತಲ್ಲ! ಅದನ್ನ ಯಾರಿಗೂ ಕದಿಯೋಕೆ ಆಗೋಲ್ಲ."

"ಸರ್, ಕ್ರಾಸ್ ಲ್ಯಾಂಡ್ ಎಸ್ಟೇಟಿನೊಳಕ್ಕೆ ದೂರದ ಪ್ರದೇಶಗಳಲ್ಲಿ ನೆಟ್ ವರ್ಕ್ ಸಂಪರ್ಕ ದುರ್ಬಲವಾಗಿದೆ. ಭಾರೀ ಗಾತ್ರದ ಫೈಲು, ವಿಡಿಯೊ ಅಪ್ ಲೋಡ್ ಅಸಾಧ್ಯ. ಅದಕ್ಕಾಗಿ ಆ ಯೋಚ್ನೆ ಕೈ ಬಿಟ್ಟೆ. ಜೊತೆಗೆ, ನಾನು ಕ್ರಾಸ್ ಲ್ಯಾಂಡ್ ಎಸ್ಟೇಟಿನಲ್ಲಿ ವಿಡಿಯೊ ಮಾಡಿದ್ದನ್ನ ಉಪಯೋಗಿಸಿಕೊಂಡು, ನಾಚಿಯಪ್ಪನ್‌ಗೆ ಬೆದರಿಕೆ ಹಾಕಿ, ಹಣ ಹೊಡೆಯೋ ಯೋಚ್ನೆ ಇತ್ತು. ಹಾಗಾಗಿ ನಾನು ನನ್ನ ಈ ಪ್ರೊಜೆಕ್ಟ್ ಬಗ್ಗೆ ಯಾರಿಗೂ ಹೇಳಿರಲಿಲ್ಲ. ಅಲ್ಲಿ ವಿಡಿಯೊ ತೆಗೆಯುವಾಗ, ಟೆಡ್ಡಿ ಬಂದೋನು ನೋಡ್ದ. ಅಲ್ಲಿಂದ ತಪ್ಪಿಸ್ಕೊಂಡು ಬಂದು, ಕನ್ನಿವೆಂಕಟೇಶನಿಗೆ ಸೂಕ್ಷ್ಮವಾಗಿ ವಿಷ್ಯ ತಿಳಿಸಿ, ಪಕ್ಕದಲ್ಲೇ ಇದ್ದ ಚಾರ್ಲಿಯ ಮನೆಯೊಳಗೆ ನುಗ್ಗಿದೆ. ಅವನು ಬಾರ್ ರೂಮಿಗೆ ಹೋದಾಗ, ಅಲ್ಲಿ ತಡಕಾಡಿದೆ. ಹೂದಾನಿಯಲ್ಲಿ ರಹಸ್ಯ ಅರೆ ಕಂಡ್ತು. ಅದರೊಳಗೆ ಇರಿಸಿ, ವೆಂಕಟೇಶನಿಗೆ ಸಂಕೇತಗಳ ಸಂದೇಶ ಕಳಿಸ್ದೆ. ಆ ಹೊತ್ತಿಗೆ ಆ ವಿಡಿಯೊ ಅಪ್ ಲೋಡ್ ಮಾಡುವ ವ್ಯವಧಾನವಂತೂ ಇರಲಿಲ್ಲ."

ಕರಮಚಂದ ಡಿಸೋಜನಿಗೆ ಎಸ್‌ಡಿ ಕಾರ್ಡ್ ಹಸ್ತಾಂತರಿಸಿದೊಡನೆ ಅವ್ನು ನಾಚಿಯಪ್ಪನ್ ಜೊತೆ ಇಳಿದು ಹೋದ. ನಾನು ಎಲ್ಲರನ್ನೂ ಉಪಹಾರಕ್ಕೆ ಕರೆದೆ.

## ರವಿರಾಜ ಬೈಕಂಪಾಡಿ

1987 ರಲ್ಲಿ ಸಿ.ಎ ಅಂತಿಮ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ಮೂವತ್ತಾರನೇ ರ್‍ಯಾಕ್‌ನೊಂದಿಗೆ ಉತ್ತೀರ್ಣರಾದ ಬಳಿಕ ಮಂಗಳೂರಿನಲ್ಲಿ ಇಪ್ಪತ್ತೆಂಟು ವರ್ಷಗಳಿಂದ ಚಾರ್ಟರ್ಡ್ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದಾರೆ. ಪತ್ತೇದಾರಿ ಕತೆ, ಚುಟುಕ ರಚನೆ ಅವರ ಹವ್ಯಾಸಗಳು. ಅವರ ಮೊದಲ ಪತ್ತೇದಾರಿ ಕತೆ 'ಭವಿಷ್ಯ' 'ಸುಧಾ' ವಾರಪತ್ರಿಕೆಯಲ್ಲಿ 1983 ರಲ್ಲಿ ಪ್ರಕಟವಾಯಿತು. ಕನ್ನಡದ ಪ್ರಮುಖ ಪತ್ರಿಕೆಗಳಲ್ಲಿ ಅನೇಕ ಕತೆಗಳು ಪ್ರಕಟಣೆಗೊಂಡಿವೆ. ಪ್ರಥಮ ಪತ್ತೇದಾರಿ ಕಿರು ಕಾದಂಬರಿ 'ಅದಲುಬದಲು' ವಾರಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ಒಂದೆರಡು ನೀಳ್ಗತೆಗಳೂ ಬೆಳಕು ಕಂಡಿವೆ. ಇದುವರೆಗೆ ಸುಮಾರು ನಲವತ್ತಕ್ಕೂ ಹೆಚ್ಚು ಕತೆಗಳು ಪ್ರಕಟಗೊಂಡಿವೆ. ಅವರ ಮೆಚ್ಚಿನ ಲೇಖಕ ಟಿ.ಕೆ. ರಾಮರಾವ್. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನಲ್ಲಿ ವಾಸವಾಗಿದ್ದಾರೆ.